dd-546
T-P-2

Reg No B G 155 17 — 9 —72

In The State First Golden Jubilee Celebrated Paper 'Satyavadi' daily, Mysore 4

56th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ ಜಯಂತಿ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಯುಧಪಾಣಿ ಜನರಿಂದ ವಾಗನ್ ಲೂಟಿ

ಚೀಲದಲ್ಲಿ ಹಾಲು

ನವದೆಹಲಿ— ಉಪಯೋಗಿಸಿದ ನಂತರ ಬಿಸಾಡಬಹುದಾದ ಪಾಲಿಥೀನ್ ಚೀಲಗಳಲ್ಲಿ ಹಾಲನ್ನು ಪ್ರಪ್ರಥಮವಾಗಿ ಭಾರತದಲ್ಲಿ ಪ್ರಪ್ರಥಮವಾಗಿ ಮಾರಲಾಗುವುದು; ಹಿಮಾಚಲ ಪ್ರದೇಶದ ಮಂಡಿಯಲ್ಲಿ ಈ ಬಗ್ಗೆ ರೂ 45 ಲಕ್ಷದ ಕ್ಷೀರ ಯಂತ್ರಾಗಾರವನ್ನು ಸ್ಥಾಪಿಸಲಾಗಿದೆ — ಒಂದೂವರೆ ಕಿಲೋ ಹಾಲು ಚೀಲದಲ್ಲಿರುತ್ತೆ — ಈ ಚೀಲಕ್ಕೆ ಕೇವಲ 3 ಪೈಸೆ ಬೀಳುತ್ತೆ — ಇದರಿಂದ ದೇಶಾದ್ಯಂತ ಹಾಲು ಹಂಚುವ ಏರ್ಪಾಡಿನ ಕ್ರಾಂತಿಯಾಗುವುದು.

★

ಜಯಂತಿ ಗ್ರಾಮಗಳು

ನವದೆಹಲಿ—25 ನೇ ಸ್ವಾತಂತ್ರ್ಯೋತ್ಸವ ವರ್ಷದಲ್ಲಿ ನಿರ್ಮಿಸಲಾಗುವ 5000 ಜಯಂತಿ ಗ್ರಾಮಗಳ ಅಸ್ತಿಭಾರ ಹಾಕುವ ಸಮಾರಂಭವನ್ನು ಗಾಂಧಿ ಜಯಂತಿ ಸಪ್ತಾಹದಲ್ಲಿ ನೆರವೇರಿಸಲಾಗುವುದೆಂದು ಪ್ರಕಟವಾಗಿದೆ

★

ನಗರ ಆಸ್ತಿ ಮಿತಿ

ಅಕ್ಟೋಬರು 8 ರಂದು ನವ ದೆಹಲಿಯಲ್ಲಿ ಸಮಾವೇಶವಾಗುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ನಗರ ಆಸ್ತಿ ಮೇಲೆ ಮಿತಿ ವಿಧಿಸುವ ಸಂಬಂಧದಲ್ಲಿ ಕಾಂಗ್ರೆಸ್ ಸಮಿತಿ ತನ್ನ ವರದಿ ಸಲ್ಲಿಸುವದು

★ ಇನ್ನು ಮುಂದೆ ಪೌರ ಕಾರ್ಮಿಕರೆಂದು ಜಾಡಮಾಲಿಗಳನ್ನು ಕರೆಯಲಾಗುವದು.

●

ಹುಳುಗಳ ಕಾಟ

ಕ್ಲೆವಲ್ಯಾಂಡ್— ಇಟ್ಲಿಯ ಅಂತರಿಕ್ಷ ನೌಕೆಯು ವಿನೂತನ ನಿಲ್ದಾಣದಲ್ಲಿ ಹುಳುಗಳು ತುಂಬಿ, ಅರ್ಧ ಗಂಟೆ ಮುಚ್ಚಲ್ಪಟ್ಟಿತ್ತು. ನಂತರ ಅವುಗಳನ್ನು ಗುಡಿಸಿಹಾಕಲಾಯಿತು.

"ವರ್ತಮಾನ್" ರಜತೋತ್ಸವ

★

ಮೈಸೂರು ನಗರದಲ್ಲಿ ಇರುವ ಒಂದು ಡಜ಼ನ್ ಪತ್ರಿಕೆಗಳಲ್ಲಿ ಒಂದಾದ "ವರ್ತಮಾನ್" ಪತ್ರಿಕೆಯ ರಜತ ಮಹೋತ್ಸವವು ಶನಿವಾರ ಸಂಜೆ ಮೈಸೂರು ಪುರಭವನದಲ್ಲಿ ವೈಭವದಿಂದ ನೆರವೇರಿತು.

ಮೈಸೂರು ರಾಜ್ಯಪಾಲರವರಾದ ಶ್ರೀ ಮೋಹನ್‌ಲಾಲ್ ಸುಖಾಡಿಯಾರವರು ರಜತ ಮಹೋತ್ಸವ ಉದ್ಘಾಟನೆ ಮಾಡುತ್ತಾ, ಪತ್ರಿಕೆಗಳಲ್ಲಿ ಲೇಖನ ಸುದ್ದಿ ಇವುಗಳನ್ನು ಪ್ರಸ್ತಾಪಿಸಿ, ವರ್ತಮಾನ್ ಪತ್ರಿಕೆ ಬೆಳ್ಳಿ ಹಬ್ಬ ಆಚರಿಸುತ್ತಿರುವ ಕುರಿತು ಪ್ರಶಂಸಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರವಾಸೋದ್ಯಮ ಮಂತ್ರಿಯವರಾದ ಶ್ರೀ ಅಜೀಜ್ ಸೇಟ್ ರವರು ಭಾಷಣ ಮಾಡುತ್ತಾ, ಸಣ್ಣಪುಟ್ಟ ಪತ್ರಿಕೆಗಳ ಕಷ್ಟಸುಖವನ್ನು ವಿವರಿಸಿ ಪತ್ರಿಕೆಗಳಿಗೆ ಸರ್ಕಾರದ ಸಹಾಯ ಮತ್ತು ಉತ್ತೇಜನ ಅಗತ್ಯ ಎಂದರು.

ಪ್ರಸಾದಕರಾದ ಶ್ರೀ ಎಂ. ವೈ. ತಿಮ್ಮಯ್ಯನವರು ಸ್ವಾಗತ ಭಾಷಣ ಮಾಡಿ, ರಾಜ್ಯಪಾಲರಿಗೆ ಬಿನ್ನವತ್ತಳೆ ಅರ್ಪಿಸಿ, ಸಣ್ಣ ಪತ್ರಿಕೆಗಳಿಗೆ ಸರ್ಕಾರದ ಉತ್ತೇಜನ ಅಗತ್ಯ ಎಂದರು

ಪುರಸಭಾಧ್ಯಕ್ಷರಾದ ಶ್ರೀ ಕೆ. ಸೋಮಸುಂದರಂರವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು

ಶ್ರೀ ಟಿ. ಜಯರಾಂ ಸಂದೇಶಗಳನ್ನು ಓದಿದರು. ಶ್ರೀ ಹೆಚ್. ಎಲ್. ಶ್ರೀಕಂಠ ಮೂರ್ತಿ ವಂದನಾರ್ಪಣೆ ಮಾಡಿದರು.

ಇಂಥಹ ಸಮಾರಂಭಗಳನ್ನು ನಡೆಸುವದರಲ್ಲೂ ಮೈಸೂರು ನಗರ ಮುಂದಾಗಿದೆ. 62 ರಲ್ಲಿ "ಸಾಧ್ವಿ" ರಜತೋತ್ಸವ ನಡೆದುದು, 69 ರಲ್ಲಿ "ಸತ್ಯವಾದಿ" ಸ್ವರ್ಣೋತ್ಸವ ನಡೆದುದು ಸ್ಮರಿಸಬಹುದು.

★

ಭೂ ಸುಧಾರಣಾ ಮಸೂದೆ

ಬೆಂಗಳೂರು— ಇಲ್ಲಿಯ ವಕೀಲರ ಸಂಘದ ಆಶ್ರಯದಲ್ಲಿ ನಡೆದ ಸೆಮಿನಾರ್‌ನಲ್ಲಿ ಭೂ ಸುಧಾರಣಾ (ತಿದ್ದುಪಡಿ) ಮಸೂದೆಯನ್ನು ಕಟ್ಟುವಾಗಿ ಟೀಕಿಸಲಾಯಿತು - ಮಸೂದೆಯನ್ನು ಸರಿಯಾಗಿ ಪರ್ಯಾಲೋಚಿಸಲು ಸೂಕ್ತ ಸಲಹೆ ಸೂಚಿಸಲು ನಿರ್ಧರಿಸಲಾಯಿತು.

★

ಅನ್ನದಾನ

ಬಿಜಾಪುರ— ಗಜಾನನ ಉತ್ಸವ ಸಮಿತಿ ಮತ್ತು ಚುರಮುರಿ ಉತ್ಪಾದನಾ ಮಂಡಲಿಯ ಆಶ್ರಯದಲ್ಲಿ ಶುಕ್ರವಾರ ಸಾಮೂಹಿಕ ಅನ್ನದಾನದ ಏರ್ಪಾಡಿತ್ತು.

★

ಮಾನಸಿಕರೋಗದ ಆಸ್ಪತ್ರೆ

ಮೈಸೂರು— ರಾಜ್ಯದಲ್ಲಿ ಮತ್ತೊಂದು ಮಾನಸಿಕ ರೋಗದ ಆಸ್ಪತ್ರೆಯನ್ನು ಸ್ಥಾಪಿಸುವ ಯೋಜನೆಯಿದೆ ಎಂದು ಮನೋರೋಗ ಸಂಬಂಧೆದ ಸಂಘದ ಸಮ್ಮೇಳನವನ್ನು ಉದ್ಘಾಟಿಸುತ್ತಾ ಆರೋಗ್ಯ ಮಂತ್ರಿ ಶ್ರೀ ಸಿದ್ದವೀರಪ್ಪ ಹೇಳಿದರು.

★

ಡಿಎಂಕೆ — ಕಾಂಗ್ರೆಸ್ ಘರ್ಷಣೆ

ವರನುಕುಡಿ (ರಾಮನಾಡು)— ಶುಕ್ರವಾರ ಅಣ್ಣಾದೊರೆ ಹುಟ್ಟಿದಹಬ್ಬದಂದು ಡಿಎಂಕೆ ಮೆರವಣಿಗೆಗಾರರು ಕಾಂಗ್ರೆಸ್ಸಿಗನೊಬ್ಬನ ಅಂಗಡಿ ಮೇಲೆ ಕೈಮಾಡಿದಾಗ ಎರಡು ಪಕ್ಷಗಳವರಲ್ಲೂ ಹೊಡೆದಾಟವಾಗಿ 3 ಮಂದಿ ಕಾಂಗ್ರೆಸ್ಸಿಗರೂ ಇಬ್ಬರು ಡಿಎಂಕೆಯವರೂ ಗಾಯಗೊಂಡರು — ರಾತ್ರಿ ಎರಡು ಪಕ್ಷಗಳ ಗುಂಪುಗಳು ಲಾಠಿಯೊಡನೆ ಸುತ್ತಾಡಿ ಪರಸ್ಪರ ಧ್ವಜಗಳನ್ನು ಕಿತ್ತು-ಸುಟ್ಟುಹಾಕಿದವು.

★

ಸಮಾಜ ರಕ್ಷಣಾ ಸ್ಕೀಂ

ನವದೆಹಲಿ— ಸಮಾಜದ ಅಸುರಕ್ಷಿತ ಜನರ ಹಿತಚಿಂತನೆಯಿಂದ, ಸರಕಾರದ ಸಮಾಜ ಕಲ್ಯಾಣ ಶಾಖೆಯು ರೂ. 758 ಕೋಟಿಯ ಸಮಾಜ ರಕ್ಷಣಾ ಸ್ಕೀಂಅನ್ನು ತಯಾರಿಸುತ್ತಿದೆ

★

ವ್ಯಾಗ್ ಲೂಟಿ

ಹಜಾರಾಬಾಗ್— ಆಯುಧಪಾಣಿಕಳ್ಳರು ಮತ್ತು ವ್ಯಾಗ್ ಲೂಟಿಗಾರರು 3ಗೂಡ್ಸ್ ವ್ಯಾಗ್‌ಗಳನ್ನು ಲೂಟಿ ಮಾಡಿ ರೂ. 1 ಲಕ್ಷ ಬೆಲೆಯ ಪದಾರ್ಥಗಳನ್ನು ಅಪಹರಿಸಿ ಪರಾರಿಯಾದರು.

★

ಭುಟ್ಟೋ ಕ್ಷಮಾಪಣೆ ಬೇಡಿದರು

ಕರಾಚಿ— ಮ್ಯೂನಿಚ್‌ನಲ್ಲಿಯ ಒಲಂಪಿಕ್ಸ್ ಕ್ರೀಡೆಗಳಲ್ಲಿ ಪಾಕಿಸ್ತಾನದ ಹಾಕಿ ಟೀಂನ ಅಸಭ್ಯ ವರ್ತನೆಗೆ ಅಧ್ಯಕ್ಷ ಭುಟ್ಟೋ ಪಶ್ಚಿಮ ಜರ್ಮನಿಯ ಕ್ಷಮಾಪಣೆ ಬೇಡಿದರು.

★

ಧರಣ ಮಾಡಿದವರ ದಸ್ತಗಿರಿ

ಪಾಟ್ನಾ— ಹೊಸ ಸರ್ಕಾರಿ ಕಚೇರಿ ಮುಂದೆ ಧರಣ ನಡೆಸಿದ 1000 ಪ್ರೌಢ ಶಾಲಾ ಉಪಾಧ್ಯಾಯರನ್ನು ದಸ್ತಗಿರಿ ಮಾಡಲಾಯಿತು.

★

ತಿರಸ್ಕಾರ

ತ್ರಿವೇಂದ್ರಂ— ಕೇರಳ ಭೂ ಸುಧಾರಣಾ ಶಾಸನದಲ್ಲಿ ಕೆಲವು ತಿದ್ದುಪಡಿ ಮಾಡಲು ಕೇಂದ್ರ ಸರಕಾರವಿತ್ತ ಸೂಚನೆಯನ್ನು ಕೇರಳ ಸರಕಾರ ತಿರಸ್ಕರಿಸಿದೆ.

● ಅಮೆರಿಕಾದಲ್ಲಿ 95 ಯೋಗಾಶ್ರಮಗಳಿವೆ.

ಬಾಳೇಹಣ್ಣು

ಜಪಾನ್ ರಾಷ್ಟ್ರವು ಪ್ರಪಂಚದ ಬಾಳೇಹಣ್ಣುಗಳನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳಲ್ಲಿ ಅತ್ಯಂತ ಪ್ರಮುಖವಾಗಿದೆ ; ಕಳೆದ ವರ್ಷ 989000 ಟನ್ನುಗಳ ಬಾಳೇಹಣ್ಣುಗಳನ್ನು ಜಪಾನು ತರಿಸಿಕೊಂಡಿದೆ.

★★

ಚೀನಾದ ನ್ಯಾಯಾಹಿರ ಕಾರ್ಯ

ನ್ಯೂಯರ್ಕ್— ಚೀನಾವು ನ್ಯಾಯಬಾಹಿರವಾಗಿ ಪ್ರತಿ ವರ್ಷ 2000 ಟ್ಕ ಅಫೀಮನ್ನು ರಫ್ತು ಮಾಡುತ್ತಿದೆಯೆಂದು ಬ್ರಿಟಿವ್ ರಾಯಲ್ ಮಿಲಿಟರಿ ವಿಜ್ಞಾನ ಕಾಲೇಜಿನ ಪ್ರೊ ॥ ಜೇಮ್ಸ್ ಟರ್ನ್‌ಬುಲ್ ಹೇಳಿರುವರು.

○○

ಹಲವಾರು ಅಂತಸ್ತುಗಳ ಕಟ್ಟಡಗಳಿಗಾಗಿ ಮನವಿ

ನಗರದಲ್ಲಿ ವಾಸಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸರ್ಕಾರ ಹಲವು ಅಂತಸ್ತಿನ ಕಟ್ಟಡಗಳನ್ನು ಕಟ್ಟಿಸಿ ಕಡಿಮೆ ದರದಲ್ಲಿ ವಸತಿ ಸೌಕರ್ಯ ಕಲ್ಪಿಸಿಕೊಡುವಂತೆ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಮೈಸೂರು ಸ್ವಗೃಹ ರಹಿತರ ಸಂಘ ನಿರ್ಣಯಿಸಿದೆ.

SHAKTI
SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

ಪುಡ'ಲ್ಲಾಂಡ' 15-9-72ರಿಂದ ಆನೋಫೆ 2ನೇ ವಾರ

ಫಿಲಂಯುಗ ಆರ್ಪಿಸುವ

ಆಂಖೊ ಆಂಖೊ ಮೆ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ : ರಾಖಿ, ರಾಜೇಶ್ ರೋರ್ಷ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10-30 ಕ್ಕೆ ದೋ ಭಾಯ್

ಅಪೆರಾ 15 9 72 ರಿಂದ

— ಆತ್ಯವೋಫ ತಮಿಳು ಚಿತ್ರ —

ತಂಗಗೋಪುರಂ

ಪಾತ್ರ : ಜಯಶಂಕರ್ ಜಯಲಲಿತ ನಿರ್ಮಲ ವಿ ಕೆ ರಾಮಸ್ವಾಮಿ
ಸೌಂದರರಾಜ ಮುಂತಾದವರು
ನಿರ್ದೇಶನ ಸೂಲಮಂಗೈ . ಸಂಗೀತ ಎಸ್ ಎಂ ಎಸ್ ನಾಯ್ಡು
ಪ್ರತಿದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

★

ಅನೆ-ಹುಡುಗ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore